# ಭಾರತ-ಚೀನಾ ಗಡಿಗೆ ಸಂಬಂಧಿಸಿದಂತೆ ರಚನಾತ್ಮಕ ಕಾರ್ಯತಂತ್ರದ ಸಮಾಲೋಚನೆ ಮತ್ತು ಸಹಕಾರ ಕುರಿತು 31ನೇ ಸಭೆ

ಆಗಸ್ಟ್ 29, 2024

ಬೀಜಿಂಗ್‌ನಲ್ಲಿ 2024ರ ಆಗಸ್ಟ್ 29ರಂದು ಭಾರತ-ಚೀನಾ ಗಡಿ ವ್ಯವಹಾರಗಳ (ಡಬ್ಲ್ಯೂಎಂಸಿಸಿ) ಕುರಿತು ರಚನಾತ್ಮಕ ಕಾರ್ಯತಂತ್ರ ರಚಿಸುವ ಸಮಾಲೋಚನೆ ಮತ್ತು ಸಹಕಾರದ 31ನೇ ಸಭೆ ನಡೆಯಿತು. ಭಾರತದ ನಿಯೋಗದ ನೇತೃತ್ವವನ್ನು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಜಂಟಿ ಕಾರ್ಯದರ್ಶಿ (ಪೂರ್ವ ಏಷ್ಯಾ) ಶ್ರೀ ಗೌರಂಗಾಲಾಲ್ ದಾಸ್ ಅವರು ವಹಿಸಿಕೊಂಡಿದ್ದರು. ಚೀನಾ ನಿಯೋಗದ ನೇತೃತ್ವವನ್ನು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಗಡಿ ಮತ್ತು ಸಾಗರ ವ್ಯವಹಾರಗಳ ಇಲಾಖೆ ಮಹಾ ನಿರ್ದೇಶಕ ಶ್ರೀ ಹಾಂಗ್ ಲಿಯಾಂಗ್ ಅವರು ವಹಿಸಿಕೊಂಡಿದ್ದರು.

2. 2024ರ ಜುಲೈನಲ್ಲಿ ಅಸ್ತಾನ ಹಾಗೂ ವಿಯೇಂಟಿಯಾನ್‌ನಲ್ಲಿ ನಡೆದ ಉಭಯ ವಿದೇಶಾಂಗ ಸಚಿವರ ಭೇಟಿಗಳ ವೇಳೆ ತೀರ್ಮಾನಿಸಿದಂತೆ ಭವಿಷ್ಯದ ಮಾತುಕತೆ, ಕಳೆದ ತಿಂಗಳು ಡಬ್ಲ್ಯೂಎಂಸಿಸಿಯಲ್ಲಿ ನಡೆದ ಸಭೆಯ ನಿರ್ಣಯದಂತೆ ಉಭಯ ದೇಶಗಳ ಕಡೆಯಿಂದ ವಾಸ್ತವ ಗಡಿ ನಿಯಂತ್ರಣ ರೇಖೆ (ಎಲ್‌ಎಸಿ) ಬಳಿ ಉಂಟಾಗಿರುವ ಸಮಸ್ಯೆಗಳನ್ನು ಕ್ಷಿಪ್ರವಾಗಿ ಬಗೆಹರಿಸಿಕೊಳ್ಳುವ ದಿಸೆಯಲ್ಲಿ ರಚನಾತ್ಮಕ ಮಾತುಕತೆ ನಡೆಸಿದರು. ಭೇಟಿಯ ವೇಳೆ, ರಾಜತಾಂತ್ರಿಕ ಹಾಗೂ ಮಿಲಿಟರಿ ಒಪ್ಪಂದಗಳ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಲು ತೀರ್ಮಾನಿಸಲಾಯಿತು.

3. ಉಭಯ ಸರ್ಕಾರಗಳ ದ್ವಿಪಕ್ಷೀಯ ಒಪ್ಪಂದಗಳು, ಶಿಷ್ಟಾಚಾರಗಳು ಹಾಗೂ ತಿಳಿವಳಿಕೆಗಳ ಆಧಾರದ ಮೇಲೆ ಗಡಿಯಲ್ಲಿ ಜಂಟಿಯಾಗಿ ಶಾಂತಿ ಹಾಗೂ ಸ್ಥಿರತೆ ಕಾಪಾಡಲು ಕೂಡ ಇದೇ ವೇಳೆ ತೀರ್ಮಾನಿಸಲಾಯಿತು. ದ್ವಿಪಕ್ಷೀಯ ಸಂಬಂಧಗಳು ಮೊದಲಿನ ಸ್ಥಿತಿಗೆ ತಲುಪಲು ಗಡಿಯಲ್ಲಿ ಶಾಂತಿ ಹಾಗೂ ಸ್ಥಿರತೆಯ ಮರುಸ್ಥಾಪನೆ ಅತ್ಯಗತ್ಯ ಎಂಬುದನ್ನು ಕೂಡ ಪುನರುಚ್ಚರಿಸಲಾಯಿತು.

4. ಚೀನಾ ವಿದೇಶಾಂಗ ವ್ಯವಹಾರಗಳ ಖಾತೆ ಸಹಾಯಕ ಸಚಿವರನ್ನು ಕೂಡ ಭಾರತದ ನಿಯೋಗವು ಭೇಟಿಯಾಯಿತು.

**ನವದೆಹಲಿ**

**ಆಗಸ್ಟ್ 29, 2024**